ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

**ಸಂಖ್ಯೆ:ಸಿ4(1):ಪ್ರೌಶಾಶಿ:ಅಶಿನೇ:01:203-14** **ದಿನಾಂಕ:19-09-2013**

## ಜ್ಞಾಪನಾ

ವಿಷಯ: ರಾಜ್ಯದ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬಿಕೊಳ್ಳಲು ಮತ್ತು ಅತಿಥಿ ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ 194 ಎಸ್‌ಟಿಬಿ 2013 ದಿನಾಂಕ:13-09-2013

2. ಆಯುಕ್ತರು, ಸಾಶಿಇ, ಬೆಂಗಳೂರು ಇವರ ಎಸ್.ಎಂ.ಎಸ್ ಸಂದೇಶ ದಿ:16-09-2013

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಆದೇಶ ಮತ್ತು ಉಲ್ಲೇಖ (2) ಎಸ್.ಎಂ.ಎಸ್. ಸಂದೇಶವನ್ನು ಉಲ್ಲೇಖಿಸುತ್ತಾ, ಅತಿಥಿ ಶಿಕ್ಷಕರ ನೇಮಕಾತಿಯನ್ನು ಇಂದು ಅಂದರೆ ದಿನಾಂಕ:19-09-2013 ರಂದು ಪೂರ್ಣಗೊಳಿಸುವಂತೆ ಎಲ್ಲಾ ಸರ್ಕಾರಿ ಶಾಲಾ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ತಿಳಿಸುವಂತೆ ನಿರ್ದೇಶಿಸಿದೆ. ಕ್ರಮಕೈಗೊಂಡ ಬಗ್ಗೆ ಹಾಗೂ ನೇಮಕವಾದ ಅತಿಥಿ ಶಿಕ್ಷಕರ ನಿಖರವಾದ ಮಾಹಿತಿಯನ್ನು ಶಾಲೆವಾರು/ತಾಲ್ಲೂಕ್‌ವಾರು/ಜಿಲ್ಲಾವಾರು ಕ್ರೋಢಿಕೃತ ಮಾಹಿತಿಯನ್ನು ದಿನಾಂಕ:30-09-2013 ರೊಳಗೆ ನಿರ್ದೇಶಕರು (ಪ್ರಾಥಮಿಕ) ಮತ್ತು ನಿರ್ದೇಶಕರು (ಪ್ರೌಢಶಿಕ್ಷಣ) ಇವರಿಗೆ ಸಲ್ಲಿಸಲು ಸೂಚಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ನಿರ್ದೇಶಕರು (ಪ್ರಾಥಮಿಕ) ಮತ್ತು (ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು , ಗುಲ್ಬರ್ಗಾ, ಹಾಗೂ ಧಾರವಾಡ ವಿಭಾಗ
3. ಸಹ ನಿರ್ದೇಶಕರು – ಬೆಂಗಳೂರು , ಮೈಸೂರು , ಧಾರವಾಡ ಹಾಗೂ ಗುಲ್ಬರ್ಗಾ ವಿಭಾಗ
4. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ತುರ್ತು ಮತ್ತು ಅಗತ್ಯ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಮೂಲಕ
6. ರಾಜ್ಯದ ಎಲ್ಲಾ ಸರ್ಕಾರಿ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ (ಆಯಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ)
7. ಕಛೇರಿ ಪ್ರತಿ